ಇ) ಉದ್ಭವಿಸುವುದಿಲ್ಲ.

ಕೊರಟಗೆರೆ ತಾಲ್ಲೂಕಿನಲ್ಲಿ ಪಶು ಚಿಕಿತ್ಸಾಲಯ ಹಾಗೂ ಆಸ್ಪತ್ರೆಯ ದುರಸ್ತಿ.

1469(1939)

ಶ್ರೀ ಚನ್ನಿಗಪ್ಪ .ಸಿ (ಕೊರಟಗೆರೆ): ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಪಶು ಚಿಕಿತ್ಸಾಲಯ ಹಾಗೂ ಪಶು ಆಸ್ಪತ್ರೆಗಳ ಸಂಖ್ಯೆ ಎಷ್ಟು?

2) ಈ ಪ್ರಾಥಮಿಕ ಪಶು ಚಿಕಿತ್ಸಾಲಯ ಹಾಗೂ ಪಶು ಆಸ್ಪತ್ರೆಯ ಕಟ್ಟಡಗಳು ದುಸ್ಥಿತಿಯಲ್ಲಿದ್ದು, ಇವುಗಳ ದುರಸ್ತಿಗೆ ಸರ್ಕಾರವು ಕ್ರಮ ಕೈಗೊಳ್ಳುವುದೇ?

3) ಈ ಪಶು ಚಿಕಿತ್ಸಾಲಯ ಹಾಗೂ ಆಸ್ಪತ್ರೆಗಳಲ್ಲಿ ಸಿಬ್ಬಂದಿಗಳ ಕೊರತೆಯಿಂದಾಗಿ ಸಕಾಲದಲ್ಲಿ ಚಿಕಿತ್ಸೆ ದೊರೆಯದೇ ಜಾನುವಾರುಗಳು ಮರಣ ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

4) ಹಾಗಿದ್ದಲ್ಲಿ ಚಿಕಿತ್ಸಾಲಯದ ಹಾಗೂ ಪಶು ಆಸ್ಪತ್ರೆಗಳ ಕಟ್ಟಡಗಳನ್ನು ದುರಸ್ತಿಗೊಳಿಸಿ ಸಿಬ್ಬಂದಿಯ ಕೊರತೆ ಇರುವ ಆಸ್ಪತ್ರೆಗಳಿಗೆ ವೈದ್ಯಾಧಿಕಾರಿಗಳನ್ನು ನೇಮಕ ಮಾಡಿ ಜಾನುವಾರುಗಳ ಚಿಕಿತ್ಸೆಗೆ ಅನುಕೂಲ ಎಂದಿನಿಂದ ಮಾಡಲಾಗುವುದು?

ಶ್ರೀ ಎ.ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು):

1) ಪಶು ಆಸ್ಪತ್ರೆ - 2; ಕೊರಟಗೆರೆ, ಹೊಳವನಹಳ್ಳಿ

ಪಶು ಚಿಕಿತ್ಸಾಲಯ - 2; ಕೊಳಾಲ, ತೋವಿನಕೆರೆ

ಪ್ರಾಥಮಿಕ ಪಶು ಚಿಕಿತ್ಸಾಲಯ - 12

1) ಬಿ.ಡಿ.ಪುರ 2) ವಡ್ಡಗೆರೆ 3) ದೊಡ್ಡಸಾಗ್ಗೆರೆ 4) ದಾಸರಹಳ್ಳಿ

5) ಅರಸಾಪುರ 6) ಅಕ್ಕಿರಾಂಪುರ 7) ತೀತ 8) ವಜ್ಜನ ಕುರ್ಕೆ

9) ಮಲ್ಲೇಕಾವು 10) ಎಳಚಗೆರೆ 11) ಇರಕಸಂದ್ರ ಕಾಲೋನಿ

12) ಹರಿಹರಪ್ಪನಪಾಳ್ಯ

2) ಕಟ್ಟಡದ ದುರಸ್ತಿಯನ್ನು ಜಿಲ್ಲಾ ಪಂಚಾಯತ್ ಮಾಡುತ್ತದೆ.

3) ಇಲ್ಲ.

4) ಕಟ್ಟಡಗಳ ದುರಸ್ತಿ ಬಗ್ಗೆ ಜಿಲ್ಲಾ ಪಂಚಾಯತ್‌ನಿಂದ ದುರಸ್ತಿಪಡಿಸಲು ಕ್ರಮ ಕೈಗೊಳ್ಳಲಾಗುವುದು. ಖಾಲಿ ಇದ್ದ ವೈದ್ಯರ ಹುದ್ದೆಗಳನ್ನು ನೇಮಿಸಲಾಗಿದೆ. ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.

ರಾಜ್ಯದ ಕಬ್ಬು ಬೆಳೆಗಾರರಿಗೆ ಅವಧಿ ಮೀರಿ ವಿಳಂಬವಾಗಿ ಹಣ ಪಾವತಿ.

1477(2099)

ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ): ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಸ್ತುತ ಇರುವ ಸಕ್ಕರೆ ಕಾರ್ಖಾನೆಗಳೆಷ್ಟು?

ಆ) ರಾಜ್ಯದಲ್ಲಿ 2000-01ನೇ ಸಾಲಿನಲ್ಲಿ ಉತ್ಪಾದನೆಯಾಗಿರುವ ಸಕ್ಕರೆಯ ಪ್ರಮಾಣವೆಷ್ಟು?

ಇ) ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳಿಗೆ ಸರಬರಾಜಾಗಿರುವ ಕಬ್ಬಿಗೆ ಬೆಲೆಯನ್ನು ರೈತರಿಗೆ ಪಾವತಿ ಮಾಡದೇ ಇದ್ದು ರೈತರಿಗೆ ಬಾಕಿಯಾಗಿ ಸಂದಾಯವಾಗಬೇಕಾದ ಮೊತ್ತವೆಷ್ಟು?

ಈ) ರೈತರಿಗೆ ಹಣ ಪಾವತಿ ಮಾಡುವುದು ಅವಧಿಗೆ ಮೀರಿ ತೀರ ವಿಳಂಬವಾಗಿ ರಾಜ್ಯದಲ್ಲಿನ ಕಬ್ಬು ಬೆಳೆಗಾರರು ಆರ್ಥಿಕ ಸಂಕಷ್ಟಕ್ಕೆ ಗುರಿಯಾಗುತ್ತಿರುವುದನ್ನು ತಡೆಗಟ್ಟಲು ಪರಿಹಾರ ಕ್ರಮ ಅಥವಾ ಮಾರ್ಗೋಪಾಯಗಳನ್ನಾಗಲೀ ಸರಕಾರ ರೂಪಿಸುತ್ತದೆಯೇ?

ಶ್ರೀ ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ರಾಜ್ಯದ ಒಟ್ಟು 35 ಸಕ್ಕರೆ ಕಾರ್ಖಾನೆಗಳ ಪೈಕಿ ಕಂಪ್ಲಿ ಸಹಕಾರ ಸಕ್ಕರೆ ಕಾರ್ಖಾನೆ ಒಂದನ್ನು ಹೊರತುಪಡಿಸಿ 34 ಸಕ್ಕರೆ ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತಿವೆ. ಇವುಗಳಲ್ಲಿ 18 ಸಹಕಾರ ವಲಯದಲ್ಲಿ, 2 ಸಾರ್ವಜನಿಕ